## ‘ಜರ್ನಲಿಸಂ@ ಡಿಜಿಟಲ್ ಕ್ರಾಸ್‌ರೋಡ್ಸ್’ ಸಮ್ಮೇಳನದಲ್ಲಿ ಕೆ.ಎನ್. ಹರಿಕುಮಾರ್

# ‘ನಕಲಿ ಸುದ್ದಿಗಳಿಂದ ಸಮಸ್ಯೆಯಾಗುತ್ತಿವೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಾಮಾಜಿಕ ಮಾಧ್ಯಮಗಳಿಗಿಂತ ಪತ್ರಿಕೆಗಳು ವಿಭಿನ್ನವಾಗಿದ್ದು, ಅವುಗಳ ಪಾತ್ರವೂ ಬೇರೆಯದ್ದೇ ಆಗಿದೆ. ಮಾಧ್ಯಮ ಎಂದಿಗೂ ಸಂಕಷ್ಟದ ವೃತ್ತಿಯಾಗಿದ್ದು, ನಕಲಿ ಸುದ್ದಿಗಳಿಂದ (ಫೇಕ್ ನ್ಯೂಸ್) ಸಮಸ್ಯೆಯಾಗುತ್ತಿವೆ’ ಎಂದು ‘ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್’ ಮಾಜಿ ಸಂಪಾದಕ ಕೆ.ಎನ್. ಹರಿಕುಮಾರ್ ಹೇಳಿದರು.

ಎಡಿಟರ್ಸ್ ಗಿಲ್ಡ್ ಆಫ್ ಇಂಡಿಯಾ ಮತ್ತು ಸ್ಕೂಲ್ ಆಫ್ ಕಮ್ಯುನಿಕೇಷನ್ ಆ್ಯಂಡ್ ಮೀಡಿಯಾ ಸ್ಟಡೀಸ್ ಆಫ್ ಸೇಂಟ್ ಜೋಸೆಫ್ಸ್ ಯುನಿವರ್ಸಿಟಿ ಶನಿವಾರ ಆಯೋಜಿಸಿದ್ದ ‘ಜರ್ನಲಿಸಂ@ ಡಿಜಿಟಲ್ ಕ್ರಾಸ್‌ರೋಡ್ಸ್’ ಸಮ್ಮೇಳನದಲ್ಲಿ ‘ಡಿಜಿಟಲ್ ಯುಗದಲ್ಲಿ ಪತ್ರಿಕೋದ್ಯಮ: ಹೊಸ ಸವಾಲುಗಳು, ನಕಲಿ ಸುದ್ದಿಗಳು ಮತ್ತು ಮಾಧ್ಯಮ ನೈತಿಕತೆ’ ಕುರಿತ ವಿಷಯವಾಗಿ ಅವರು ಮಾತನಾಡಿದರು.



‘ಜರ್ನಲಿಸಂ@ ಡಿಜಿಟಲ್ ಕ್ರಾಸ್‌ರೋಡ್ಸ್’ ಸಮ್ಮೇಳನದಲ್ಲಿ ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಮಾಜಿ ಸಂಪಾದಕ ಕೆ.ಎನ್. ಹರಿಕುಮಾರ್ ಮಾತನಾಡಿದರು. ಸ್ವರಾಜ್ಯದ ಸಂಪಾದಕೀಯ ನಿರ್ದೇಶಕ ಆರ್. ಜಗನ್ನಾಥನ್, ಇಂಡಿಯಾ ಟುಡೇ ಸಂಪಾದಕೀಯ ನಿರ್ದೇಶಕ ರಾಜ್ ಚೆಂಗಪ್ಪ ಭಾಗವಹಿಸಿದ್ದರು

‘ಮಾಧ್ಯಮ ನೀತಿಗೆ ಸಂಬಂಧಿಸಿದಂತೆ ಸರ್ಕಾರದ ಜವಾಬ್ದಾರಿ’ ಕುರಿತ ವಿಷಯದ ಬಗ್ಗೆ ಮಾತನಾಡಿದ ಕಂದಾಯ ಸಚಿವ ಕೃಷ್ಣಬೈರೇಗೌಡ, ‘ನಕಲಿ ಸುದ್ದಿಗಳ ಅಪಾಯ ಅತಿಯಾಗಿದ್ದು, ಸತ್ಯ ಮತ್ತು ವಾಕ್ ಸ್ವಾತಂತ್ರ್ಯವನ್ನು ರಕ್ಷಿಸಿಕೊಂಡು ಸಮತೋಲಿತ ಸುದ್ದಿಗಳನ್ನು ನೀಡುವುದು ಅಗತ್ಯವಾಗಿದೆ’ ಎಂದರು.

‘ಸರ್ಕಾರ ‘ಫ್ಯಾಕ್ಟ್ ಚೆಕ್’ ಘಟಕವನ್ನು ಸ್ಥಾಪಿಸುವುದರಿಂದ ನಕಲಿ ಸುದ್ದಿಗಳನ್ನು ತಡೆಗಟ್ಟುವುದು ಸಾಧ್ಯವಿಲ್ಲ. ಪತ್ರಕರ್ತರು ಜವಾಬ್ದಾರಿಯುತವಾಗಿರಬೇಕು’ ಎಂದು ಸಮ್ಮೇಳನದಲ್ಲಿ ಭಾಗವಹಿಸಿದ್ದ ಬಹುತೇಕ ಗಣ್ಯರು ಅಭಿಪ್ರಾಯಪಟ್ಟರು.

ಎಡಿಟರ್ಸ್ ಗಿಲ್ಡ್ ಆಫ್ ಇಂಡಿಯಾದ ಅಧ್ಯಕ್ಷ ಅನಂತ್ ನಾಥ್, ಸೇಂಟ್ ಜೋಸೆಫ್ಸ್ ವಿವಿ ಡೀನ್ ಫಾದರ್ ರಿಚರ್ಡ್ ರೆಗೊ, ರಾಷ್ಟ್ರೀಯ ಕಾನೂನು ಶಾಲೆಯ ಕುಲಪತಿ ಡಾ. ಸುಧೀರ್ ಕೃಷ್ಣಸ್ವಾಮಿ ಅವರು ಭಾಗವಹಿಸಿದ್ದರು.